**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.148/2020**

| | | |
|---|---|---|
| ಸಾಕ್ಷಿದಾರರ ಹೆಸರು | : | ಸುಪ್ರೀತ್ |
| ತಂದೆಯ/ಗಂಡನ ಹೆಸರು | : | ಕಿರಣ ಕುಮಾರ |
| ವಯಸ್ಸು | : | 16 ವರ್ಷ |
| ಉದ್ಯೋಗ | : | ಪ್ರಥಮ ಪಿಯುಸಿ |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 5

ಸಿ.ಡಬ್ಲ್ಯೂ 13

ದಿ: 16-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ಚಾಸಾ-12 ನನ್ನ ತಾಯಿ. ಚಾಸಾ-1 ನನ್ನ ಚಿಕ್ಕಪ್ಪ. ನನ್ನ ತಂದೆಯ ಹೆಸರು ಕಿರಣ ಕುಮಾರ ನನ್ನ ಅಣ್ಣನ ಹೆಸರು ಸೃಜನ್. ನನ್ನ ತಂದೆ ಮತ್ತು ಅಣ್ಣ ಈಗ ಜೀವಂತ ಇಲ್ಲ. ಅವರು ಸುಮಾರು 05 ವರ್ಷಗಳ ಹಿಂದೆ ಕಲ್ಲು ಕ್ವಾರಿಯ ಗುಂಡಿಯ ನೀರಿನಲ್ಲಿ ಬಿದ್ದು ತೀರಿಕೊಂಡಿದ್ದಾರೆ. ಆ ಕ್ವಾರಿಯನ್ನು ಹೇಮರಾಜರವರ ನಿರ್ಲಕ್ಷ್ಯತನದಿಂದ ನಿರ್ವಹಿಸುತ್ತಿದ್ದರು ಆದ್ದರಿಂದ ನನ್ನ ತಂದೆ ಮತ್ತು ಅಣ್ಣನ ಸಾವಿಗೆ ಕಾರಣಕರ್ತರಾಗಿರುತ್ತಾರೆ.

2. ದಿಃ 25-05-2020 ರಂದು ನಾನು, ನನ್ನ ತಂದೆ, ತಾಯಿ ಮತ್ತು ಅಣ್ಣ ಎಲ್ಲಾ ಸೇರಿ ನಾವು ದಾವಣಗೆರೆಯಿಂದ ಶಂಕರನಹಳ್ಳಿಯ ನಮ್ಮ ಅಜ್ಜಿಯ ಮನೆಗೆ ಹೋಗಿದ್ದೆವು. ನಾನು ಮತ್ತು ನಮ್ಮ ತಾಯಿ ಮನೆಯಲ್ಲಿದ್ದಾಗ ಬೆಳಿಗ್ಗೆ ಸುಮಾರು 11.00 ಗಂಟೆಗೆ ನನ್ನ ತಂದೆ ಮತ್ತು ಅಣ್ಣ ಸುತ್ತಾಡಲು ಬೈಕ್ ನಲ್ಲಿ ಹೋಗಿದ್ದರು. ಮಧ್ಯಾಹ್ನ 12.00 ಗಂಟೆಗೆ ಕ್ವಾರಿಯ ಗುಂಡಿಯಲ್ಲಿ ಬಿದ್ದು ನನ್ನ ಅಣ್ಣ ಮತ್ತು ತಂದೆ

ತೀರಿಕೊಂಡಿದ್ದಾರೆ ಅಂತ ಗೊತ್ತಾಯಿತು. ನಂತರ ನಾನು, ನನ್ನ ತಾಯಿ ಮತ್ತು ಗ್ರಾಮಸ್ಥರು ಸೇರಿ ಕೃತ್ಯ ನಡೆದ ಸ್ಥಳಕ್ಕೆ ಹೋದೆವು. ಅಲ್ಲಿ ನನ್ನ ತಂದೆ ಮತ್ತು ಅಣ್ಣ ಕ್ವಾರಿಯ ನೀರಿನಲ್ಲಿ ಬಿದ್ದಿದ್ದು, ನಮ್ಮ ಅಣ್ಣನ ಶವ ಸಿಕ್ಕಿತು, ನನ್ನ ತಂದೆಯ ಶವ ಆ ದಿನ ಸಿಕ್ಕಿರಲಿಲ್ಲ ಮಾರನೇ ದಿನ ಸಿಕ್ಕಿತು. ಆ ಕ್ವಾರಿಯನ್ನು ನಾನು ನೋಡಿದಾಗ ಅದರಲ್ಲಿ ಗುಂಡಿ ಇದ್ದು ನೀರು ತುಂಬಿತ್ತು. ಆ ಕ್ವಾರಿ 50-60 ಅಡಿ ಆಳವಾಗಿತ್ತು. ನಮ್ಮ ಅಣ್ಣ ಮತ್ತು ತಂದೆಯವರು ಬೈಕ್ ನ್ನು ನಿಲ್ಲಿಸಿ ಬಹಿರ್ದೆಸೆಗೆ ಅಂತ ಅಲ್ಲಿಗೆ ಹೋಗಿದ್ದರು. ಆ ಕಲ್ಲು ಕ್ವಾರಿಗೆ ಬೇಲಿ ಹಾಕಿರಲಿಲ್ಲ, ಅಲ್ಲಿ ಅಪಾಯಕ ಸ್ಥಳ ಅಂತ ಬೋರ್ಡ ಹಾಕಿರಲಿಲ್ಲ, ಕ್ವಾರಿಯ ಮಾಲೀಕರಿಗೆ ಅಲ್ಲಿ ಆಳವಾದ ಗುಂಡಿ ಇದೆ ಅಂತ ಗೊತ್ತಿದ್ದರೂ ಈ ತರ ರಕ್ಷಣೆ ಮಾಡಿಲ್ಲದೇ ಇರುವುದರಿಂದ ನಮ್ಮ ತಂದೆ ಮತ್ತು ಅಣ್ಣ ತೀರಿಕೊಂಡಿರುತ್ತಾರೆ. ಆ ಕಲ್ಲು ಕ್ವಾರಿಯನ್ನು ಜಯಪ್ಪರವರು ನಡೆಸುತ್ತಿದ್ದರು, ಅವರು ತೀರಿಕೊಂಡ ನಂತರ ಅವರ ಮಗ ಹೇಮರಾಜರವರು ನಡೆಸುತ್ತಿದ್ದಾರೆ. ಶವ ಪಂಚನಾಮೆ ಮಾಡುವ ಕಾಲಕ್ಕೆ ತೆಗೆದಿರುವ ಪೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ನಿಪಿ- 2 ಮತ್ತು 3 ಅಂತ ಗುರುತಿಸಲಾಗಿದೆ. ನಿಪಿ-2 ಮತ್ತು 3 ರ ಪೋಟೋಗಳಲ್ಲಿ ನನ್ನ ಅಣ್ಣ ಮತ್ತು ತಂದೆಯ ಶವ ಕಂಡು ಬರುತ್ತದೆ. ಕ್ವಾರಿಯ ಮಾಲೀಕರೆ ನನ್ನ ಅಣ್ಣ ಮತ್ತು ತಂದೆಯ ಸಾವಿಗೆ ಕಾರಣ ಆಗಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಇ.ಎಫ್., ವಕೀಲರಿಂದ ಆರೋಪಿತರ ಪರವಾಗಿ**:

3. ದಿಃ 25-05-2020 ರಂದು ಕೋವಿಡ್ ಇತ್ತು ಅಂದರೆ ನಿಜ. ನಿಷೇಧಾಜ್ಞೆ ಇತ್ತು ಅಂದರೆ ನಿಜ. ಆ ಸಮಯದಲ್ಲಿ ಯಾರು ಹೊರಗಡೆ ಹೋಗಬಾರದಿತ್ತು ಅಂದರೆ ನಿಜ. ಆ ದಿನ ನನ್ನ ತಂದೆ ಮತ್ತು ಅಣ್ಣ ಹೋಗಿದ ಬೈಕ್ ನನ್ನ ತಂದೆಯವರ ಹೆಸರಿನಲ್ಲಿತ್ತು. ಆ ಕ್ವಾರಿಯ ಆಳವಾದ ಅಳತೆಯನ್ನು ಗ್ರಾಮಸ್ಥರು ನಮಗೆ ತಿಳಿಸಿದರು. ಆ ಗ್ರಾಮಸ್ಥರು ಹೆಸರು ನನಗೆ ಗೊತ್ತಿಲ್ಲ. ಹೇಮರಾಜರವರಿಗೆ ಆ ಕಲ್ಲು ಕ್ವಾರಿ ಸಂಬಂಧಪಟ್ಟಿದ್ದು ಅಂತ ಊರಿನ ಗ್ರಾಮಸ್ಥರು ತಿಳಿಸಿದರು. ಹೇಮರಾಜರವರ ನಿರ್ಲಕ್ಷತನನಿಂದ ನನ್ನ ತಂದೆ ಮತ್ತು ಅಣ್ಣರವರು ಮೃತ ಪಟ್ಟಿದ್ದಾರೆ ಅಂತ ಪೊಲೀಸರು ಹೇಳಿ ಕೊಟ್ಟಿದ್ದಾರೆ ಅದಕ್ಕಾಗಿ ನಾನು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ಆ ಕಲ್ಲು ಕ್ವಾರಿಯ ಬಗ್ಗೆ ನಾನು ದಾಖಲೆಗಳನ್ನು

ನೋಡಿಲ್ಲ. ಆ ಕಲ್ಲು ಕ್ವಾರಿಯನ್ನು ಮೊದಲು ಜಯಪ್ಪರವರು ನಡೆಸುತ್ತಿದ್ದರು ನಂತರ ಹೇಮರಾಜರವರು ನಡೆಸುತ್ತಿದ್ದಾರೆ ಅಂತ ಪೊಲೀಸರು ನನಗೆ ಮಾಹಿತಿ ನೀಡಿದರು ಅಂದರೆ ಸರಿ. ನಿಪಿ-7 ರ ಶವ ಪಂಚನಾಮೆ ಮಾಡುವ ಕಾಲಕ್ಕೆ ನಾನು ಹಾಜರಾಗಿರಲಿಲ್ಲ. ನಿಪಿ-2 ಮತ್ತು 3 ನ್ನು ನೋಡಿ ನಮ್ಮ ತಂದೆ ಮತ್ತು ಅಣ್ಣನ ಶವ ಅಂತ ಹೇಳುತ್ತಿದ್ದೇನೆ. ನನ್ನ ತಂದೆ ಮತ್ತು ಅಣ್ಣರವರ ಸ್ವಂತ ನಿರ್ಲಕ್ಷತನದಿಂದ ತೀರಿಕೊಂಡಿರುತ್ತಾರೆ ಯಾರ ನಿರ್ಲಕ್ಷತನದಿಂದ ಅಲ್ಲ ಅಂದರೆ ಸರಿಯಲ್ಲ. ಕ್ವಾರಿಗೆ ಬೇಲಿ ಹಾಕಿರಲಿಲ್ಲ ಮತ್ತು ರಕ್ಷಣೆಯ ಬಗ್ಗೆ ಯಾವುದೇ ವ್ಯವಸ್ಥೆ ಮಾಡಿರುವುದಿಲ್ಲ ಅಂತ ಪೊಲೀಸರ ಮಾತು ಕೇಳಿ ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಅಣ್ಣ ಮತ್ತು ತಂದೆಯ ಸಾವಿಗೆ ಆರೋಪಿ ಕಾರಣ ಅಲ್ಲ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.